**ಸಿ.ಸಿ.ನಂ.10/2021**

ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 1

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ದಿನಾಂಕಃ 29-06-2020 ರಂದು ಗಲಾಟೆ ಆಗಿರುತ್ತದೆ. ಆರೋಪಿ ನನ್ನ ಗಂಡನ ಅಣ್ಣ ಆಗಬೇಕು. ಆರೋಪಿಗೂ ಹಾಗೂ ನಮಗೂ ಜಮೀನಿನ ವಿಚಾರವಾಗಿ ಸಿವಿಲ್ ವ್ಯಾಜ್ಯಗಳು ಮಾನ್ಯ ಹೈ ಕೋರ್ಟನಲ್ಲಿ ಬಾಕಿ ಇರುತ್ತದೆ ಎಂದರೆ ಸರಿ. ನಾವು ಉಳುಮೆ ಮಾಡುತ್ತಿರುವ ಜಮೀನು ನನ್ನ ಗಂಡನ ತಂದೆ ನಮಗೆ ನೀಡಿರುತ್ತಾರೆ. ನನ್ನ ಗಂಡನ ತಂದೆಯವರು ಎಲ್ಲರಿಗೂ ಜಮೀನನ್ನು ಭಾಗ ಮಾಡಿ ಕೊಟ್ಟಿರುತ್ತಾರೆ. ಗಲಾಟೆ ಆದ ಸಂದರ್ಬದಲ್ಲಿ 20 ಜನ ಬಂದಿದ್ದರು. ನಮ್ಮ ಊರಿನವರು ಹಾಗೂ ಉಡೇವಾ ಊರಿನವರು ಸಹ ಬಂದಿದ್ದರು. ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಮ್ಮ ಕೂದಲನ್ನು ಹಿಡಿದು ಎಳೆದಾಡಿರುವುದಿಲ್ಲ, ನಿಮಗೆ ಹಲ್ಲೆ ಮಾಡಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಅದೆ ದಿನ ಸಂಜೆ 5-00 ಗಂಟೆ ಸಮಯಕ್ಕೆ ಬಂದು ಮಹಜರ್ ಬರೆದು, ಛಾಯಚಿತ್ರವನ್ನು ತೆಗೆದು ಹೇಳಿಕೆಯನ್ನು ಪಡೆದುಕೊಂಡು ಹೋಗಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ, ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೂ ಹಾಗೂ ಆರೋಪಿಗೂ ಜಮೀನಿನ ವಿಚಾರವಾಗಿ ವೈಮನಸ್ಸು ಇರುವ ಕಾರಣ ಆರೋಪಿಯ ಮೇಲೆ ಸುಳ್ಳು ದೂರನ್ನು ನೀಡಿರುತ್ತಿರಾ ಎಂದರೆ ಸರಿಯಲ್ಲ. ನಮಗೂ ಹಾಗೂ ಆರೋಪಿಗೆ ತರೀಕೆರೆಯ ಮಾನ್ಯ ಹಿರಿಯ ನ್ಯಾಯಾಲಯದಲ್ಲೂ ಸಹ ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದರೆ ಸರಿ. ಆರೋಪಿಯ ಹೆಸರಿನಲ್ಲಿರುವ ಜಮೀನನ್ನು ಅವರು ಊರು ಬಿಟ್ಟು ಹೋಗಿರುತ್ತಾರೆಂದು ನಿಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತಿರಾ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ ಆರೋಪಿ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**